**ಸಾಕ್ಷಿಯನ್ನು ಪ್ರಮಾಣ ವಚನ ಭೋಧಿಸಲಾದ ದಿನಾಂಕಃ 12-02-2025**

**ಮುಂದುವರೆದ ಪಾಟೀ ಸವಾಲುಃ 1 ರಿಂದ 4 ನೇ ಪ್ರತಿವಾದಿ ಪರ ಶ್ರೀ. ಎಮ್ ಎಸ್ ಡಿ ವಕೀಲರಿಂದಃ**

5. ಅಸಲ ದಾವೆ ನಂ.49/2021 ನೇದ್ದನ್ನು ಇದೆ ನ್ಯಾಯಾಲಯದಲ್ಲಿ ಗಜಾನನ ಲಕ್ಷ್ಮಣ ಕುಲಕರ್ಣಿ ಇವರ ವಾರಸುದಾರರು ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಪ್ರತಿವಾದಿ ನಂ.2(ಎ) ಎಂದು ಇರುತ್ತೇನೆ. ಸದರಿ ದಾವೆಯಲ್ಲಿ ಪ್ರತಿವಾದ ಪತ್ರ ಹಾಕಿದ ಬಗ್ಗೆ ನಮ್ಮ ವಕೀಲರಿಗೆ ಗೊತ್ತು. ಸದರಿ ಅಸಲು ದಾವೆ ನಂ.49/2021 ವಜಾ ಆಗಿರುತ್ತದೆ ಎಂದರೆ ಸರಿ. ಸದರಿ ದಾವೆಯು ವಜಾ ಆದ ನಂತರ ಮತ್ತೊಂದು ಹೊಸ ದಾವೆ ನಂ.83/2023 ನೇದ್ದನ್ನು ಅಶೋಕ ಗಜಾನನ ಕುಲಕರ್ಣಿ ಇವರ ಹೆಂಡತಿ ಮತ್ತು ಮಕ್ಕಳು ಸಲ್ಲಿಸಿದ್ದಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ನಾನು ಪಕ್ಷಗಾರನಾಗಿರುತ್ತೇನೆ. ನನ್ನ ತಂದೆಯ ತಂದೆ-ಬಿಕಾಜಿ ಇವರ ಎಲ್ಲಾ ವಾರಸುದಾರರನ್ನು ದಾವಾ ನಂ.83/2023 ನೇದ್ದರಲ್ಲಿ ಸೇರಿಸಲಾಗಿದೆ. ಬಿಕಾಜಿಯವರಿಗೆ ಇಬ್ಬರು ಹೆಂಡತಿಯರು ಇದ್ದರು ಎಂದರೆ ನನಗೆ ಗೊತ್ತಿಲ್ಲ. ಬಿಕಾಜಿ ಇವರ ಮೊದಲನೆ ಹೆಂಡತಿ ಹೆಸರು ಲಕ್ಷ್ಮಿ ಎಂದರೆ ನಿಜ. ಇವರಿಗೆ ಎರಡು ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳು ಎಂದರೆ ಸರಿ. ಇಬ್ಬರು ಹೆಣ್ಣು ಮಕ್ಕಳ ಹೆಸರು ಕುಸುಮ ಮತ್ತು ಸರಳಾ ಎಂದರೆ ಸರಿ. ಈ ದಾವೆಯಲ್ಲಿ ಕುಸಮ ಇವಳನ್ನು ಪಕ್ಷಗಾರಳನ್ನಾಗಿ ಮಾಡಿಲ್ಲ ಎಂದರೆ ಸರಿ. ಕುಸುಮ ಇವಳು ಮರಣ ಹೊಂದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಇವಳಿಗೆ ಒಬ್ಬ ಮಗ ಇದ್ದಾನೆ ಅವನ ಹೆಸರು ನಂದಕುಮಾರ ಮಂತ್ರಿ ಎಂದರೆ ನನಗೆ ಗೊತ್ತಿಲ್ಲ. ಸರಳಾ ಇವಳು ಕೂಡಾ ಮರಣ ಹೊಂದಿದ್ದಾರೆ ಇವಳಿಗೆ ಒಬ್ಬ ಮಗ ಇದ್ದಾನೆ ಅವನ ಹೆಸರು ಕಿಶೋರ ಪ್ರಭಾಕರ ಮೊರಡೆಕರ ಎಂದರೆ ನನಗೆ ಗೊತ್ತಿಲ್ಲ.

6. ಬಿಕಾಜಿ ಇವರ ಎರಡನೇ ಹೆಂಡತಿ ಹೆಸರು ಲತಾಬಾಯಿ ಎಂದರೆ ನನಗೆ ಗೊತ್ತಿಲ್ಲ. ಇವಳಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಅವರುಗಳು 1.ಚೈತ್ರಾ, 2.ಕ್ಷೆಮಾ, 3.ದಯಾ ಮತ್ತು 4. ಸಂಧ್ಯಾ ಎಂದರೆ ನನಗೆ ಗೊತ್ತಿಲ್ಲ. ಅಸಲ ದಾವಾ ನಂ.83/2023 ನೇದ್ದರಲ್ಲಿ ನಾನು ಪ್ರತಿವಾದ ಪತ್ರವನ್ನು ಸಲ್ಲಿಸಿಲ್ಲಾ ಎಂದರೆ ನನಗೆ ಗೊತ್ತಿಲ್ಲ. ನಮ್ಮ ವಕೀಲರಿಗೆ ಗೊತ್ತು. ಬಿಕಾಜಿ ಇವರ ಮೊದಲನೆ ಮತ್ತು ಎರಡನೇ ಹೆಂಡತಿಗೆ ಹೆಣ್ಣು ಮಕ್ಕಳು ಇದ್ದರು ಕೂಡಾ ಗೊತ್ತಿಲ್ಲವೆಂದು ಸುಳ್ಳು ಸಾಕ್ಷಿ ಹೇಳಿ ಅವರನ್ನು ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ನಮಗೆ ಲಾಭ ಆಗುವ ಉದ್ದೇಶದಿಂದ ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿಯಲ್ಲ. ಈ ದಾವೆಯಲ್ಲಿ ಎಲ್ಲಾ ಆಸ್ತಿಗಳನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜ ಬಿಕಾಜಿ ಇವರ ಸಮಕ್ಷಮದಲ್ಲಿ ನನ್ನ ತಂದೆ ಮತ್ತು ಮಂಗೇಶ ಇವರು ಪಾಲುವಾಟ್ನಿಯನ್ನು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಸದರಿ ಪಾಲುವಾಟ್ನಿ ಪ್ರಕಾರ ನನ್ನ ತಂದೆ ಪ್ರಕಾಶ ಉರ್ಫ ನಾರಾಯಣ ಇವರು ಕಂದಾಯ ಇಲಾಖೆಗೆ ವರದಿ ನೀಡಿ ತಮ್ಮ ಹೆಸರನ್ನು ಪಹಣಿ ಪತ್ರಿಕೆಗಳಲ್ಲಿ ನಮೂದು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಇವರು ಸರ್ವೆ ನಂ.44 ಮತ್ತು 45 ನೇದ್ದರ ಪಹಣಿ ಪತ್ರಿಕೆಗಳಲ್ಲಿ ವರದಿ ನೀಡಿ ತಮ್ಮ ಹೆಸರನ್ನು ದಾಖಲು ಮಾಡಿಕೊಂಡಿದ್ದರು ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ಎಮ್ ಇ ನಂ.248 ನೇದ್ದರ ದೃಡಿಕೃತ ಪ್ರತಿಯನ್ನು ತೋರಿಸಿ ಅದನ್ನು ಓದಿಹೇಳಲಾಗಿ ಅದರಲ್ಲಿರುವ ವಿಷಯವನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ.1 ಎಂದು ಗುರುತಿಸಲಾಯಿತು. ಎಮ್ ಇ ನಂ.248 ನೇದ್ದರಲ್ಲಿ ತೋರಿಸಿದ ಸರ್ವೆ ನಂ.45ನೇದ್ದನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನನ್ನ ಚಿಕ್ಕಪ್ಪ ಮಂಗೇಶ ಕುಲಕರ್ಣಿ ಮತ್ತು ನನ್ನ ತಂದೆ ಪ್ರಕಾಶ ಇವರ ನಡುವೆ ಈಗಾಗಲೆ ಪಾಲು ವಾಟ್ನಿ ಆಗಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ಅಜ್ಜ ಬಿಕಾಜಿ ಇವರಿಗೆ ಸಂಬಂಧಸಿದ ಆಸ್ತಿ ಎಂದರೆ ಸರಿ. ಈಗಾಗಲೆ ದಾವಾ ಆಸ್ತಿಗಳನ್ನು ಮತ್ತು ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಉಳಿದ ಶೇತ್ಕಿ

ಜಮೀನು ಆಸ್ತಿಗಳನ್ನು ಪಾಲುವಾಟ್ನಿ ಮಾಡಿಕೊಂಡಿದ್ದರಿಂದ ಈ ದಾವೆಯನ್ನು ಸಲ್ಲಿಸಲು ಕಾರಣವುಂಟಾಗಿಲ್ಲ ಎಂದರೆ ಸರಿಯಲ್ಲ.

**ಮುಂದಿನ ಪಾಟೀ ಸವಾಲಗಾಗಿ ವಕೀಲರು ಸಮಯಾವಕಾಶ ಕೇಳಿದ್ದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು**.

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ**
**ಖಾನಾಪೂರ.**